ಮೈಸೂರು ವಿಶ್ವವಿದ್ಯಾನಿಲಯ

**ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ ಹಾಗೂ ಬಾಹುಬಲಿ ಪ್ರಾಕೃತ ವಿದ್ಯಾಪೀಠ ಶ್ರೀ ದಿಗಂಬರ ಜೈನ ಮಠ, ಶ್ರವಣಬೆಳಗೊಳ, ಇವರ ಸಂಯುಕ್ತಾಶ್ರಯದಲ್ಲಿ ಹಾಗೂ**

**ಪುರಾತತ್ತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಲಕಾಡು ಇವರ ಸಹಯೋಗದಲ್ಲಿ**

**ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ**

# ತಲಕಾಡಿನ ಗಂಗರು ಮತ್ತು ಚಾವುಂಡರಾಯ

## ವಿಚಾರ ಸಂಕಿರಣದ ವರದಿ

ಮೈಸೂರು ವಿಶ್ವವಿದ್ಯಾನಿಲಯದ ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ ಹಾಗೂ ಬಾಹುಬಲಿ ಪ್ರಾಕೃತ ವಿದ್ಯಾಪೀಠ ಶ್ರೀ ದಿಗಂಬರ ಜೈನಮಠ ಶ್ರವಣಬೆಳಗೊಳ ಇವರ ಸಂಯುಕ್ತ ಆಶ್ರಯದಲ್ಲಿ ಪುರಾತತ್ತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಲಕಾಡು ಇವರ ಸಹಯೋಗದಲ್ಲಿ ತಾ. 02.02.2022 ಮತ್ತು 03.02.2022 ರಂದು 'ತಲಕಾಡಿನ ಗಂಗರು ಮತ್ತು ಚಾವುಂಡರಾಯ' ವಿಷಯವನ್ನು ಕುರಿತು ತಲಕಾಡಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಜರುಗಿದ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣದ ಸಂಕ್ಷಿಪ್ತ ವರದಿ.

ತಾ. 02.02.2022ನೇ ಬುಧವಾರ ಬೆಳಿಗ್ಗೆ 10.30ಕ್ಕೆ ಪತ್ರಾಗಾರ ಇಲಾಖೆಯು ಆಯೋಜಿಸಿದ್ದ ವಸ್ತು ಪ್ರದರ್ಶನದ ಹಾಗೂ ಪುರಾತತ್ವ ಮತ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ವತಿಯಿಂದ ಏರ್ಪಡಿಸಿದ್ದ ತಲಕಾಡಿನ ಉತ್ಖನನಕ್ಕೆ ಸಂಬಂಧಿಸಿದ ಭಿತ್ತಿಚಿತ್ರ ಪ್ರದರ್ಶನದ ಉದ್ಘಾಟನೆಯನ್ನು ಸಹ ಮೈಸೂರು ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಪ್ರೊ.ಜಿ.ಹೇಮಂತಕುಮಾರ್ ಅವರು ನೆರವೇರಿಸಿದರು.

ಉದ್ಘಾಟನೆಯ ಸಭಾ ಕಾರ್ಯಕ್ರಮವು ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗದ ಅಧ್ಯಾಪಕಿಯರಾದ ಡಾ. ಎಂ.ಎಸ್. ಪದ್ಮ ಮತ್ತು ಡಾ. ಬಿ.ಎಲ್. ಶಶಿರೇಖ ಅವರ ಬಾಹುಬಲಿ ಕುರಿತು ಪ್ರಾರ್ಥನಾ ಗೀತೆ ಮತ್ತು ಕಾಲೇಜಿನ ವಿದ್ಯಾರ್ಥಿಗಳು ಹಾಡಿದ ನಾಡಗೀತೆಯೊಂದಿಗೆ ಪ್ರಾರಂಭವಾಯಿತು.

ಸಭೆಯಲ್ಲಿ ವೇದಿಕೆಯ ಮೇಲೆ ಉಪಸ್ಥಿತರಿದ್ದ ಎಲ್ಲ ಗಣ್ಯಮಾನ್ಯ ಅತಿಥಿಗಳನ್ನು ಅಧ್ಯಕ್ಷರಾದ ಪ್ರೊ.ವಿಜಯಕುಮಾರಿ ಎಸ್. ಕರಿಕಲ್ ಅವರು ಆತ್ಮೀಯವಾಗಿ ಸ್ವಾಗತಿಸಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ; ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿವೃತ್ತ ಪ್ರಾಧ್ಯಾಪಕರಾದ ಪ್ರೊ.ನೀಲಗಿರಿ ತಳವಾರ ಅವರು – ಶ್ರೀ ಕ್ಷೇತ್ರ ಶ್ರವಣಬೆಳಗೊಳದ ಪರಮಪೂಜ್ಯ ಜಗದ್ಗುರು, ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಯವರ ಅಭಿಲಾಷೆಯಂತೆ ಗಂಗರಸರ ರಾಜಧಾನಿಯಾಗಿದ್ದ ತಲಕಾಡಿನಲ್ಲಿಯೇ ಪ್ರಸ್ತುತ ವಿಚಾರ ಸಂಕಿರಣ ಆಯೋಜನೆಗೊಂಡಿರುವುದು ಅರ್ಥಪೂರ್ಣವಾಗಿದೆ ಎಂದು ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯದ ಸನ್ಮಾನ್ಯ ಕುಲಪತಿಗಳಾದ ಪ್ರೊ.ಜಿ. ಹೇಮಂತಕುಮಾರ್‌ರವರು ದೀಪ ಬೆಳಗಿಸುವುದರ ಮೂಲಕ ವಿಚಾರ ಸಂಕಿರಣವನ್ನು ಉದ್ಘಾಟಿಸಿದರು. ಉದ್ಘಾಟನಾ ಭಾಷಣವನ್ನು ಮಾಡುತ್ತಾ ಅವರು 'ಚಾವುಂಡರಾಯ ಕವಿಯೂ, ಕಲಿಯೂ ಆಗಿದ್ದ, ಅಪ್ರತಿಮ ಸಾಹಸಿ ಯುದ್ಧಚತುರನೂ ಆಗಿದ್ದನು. ತನ್ನ ತಾಯಿ ಕಾಳಲಾದೇವಿಯ ಆಸೆಯಂತೆ ಶ್ರವಣಬೆಳಗೊಳದಲ್ಲಿ ಗೊಮ್ಮಟೇಶ್ವರ ಬಾಹುಬಲಿಯ ಮೂರ್ತಿಯನ್ನು ನಿರ್ಮಾಣ ಮಾಡಿಸಿದನು. ಚಾವುಂಡರಾಯನ ಮೂಲ ತಲಕಾಡಾಗಿದ್ದು, ಗಂಗರು ದೀರ್ಘಕಾಲದವರೆಗೆ ಆಳ್ವಿಕೆ ನಡೆಸಿದ್ದರು. ಈ ತಲಕಾಡಿನಲ್ಲಿ ವಿಚಾರ ಸಂಕಿರಣ ನಡೆಯುತ್ತಿರುವುದು ಅತ್ಯಂತ ಸಂತೋಷದ ಸಂಗತಿ ಎಂದು ಶ್ಲಾಘಿಸಿದರು.

ಈ ಸಮಾರಂಭದಲ್ಲಿ ಶ್ರವಣಬೆಳಗೊಳದ ಶ್ರೀಮಠದ ಪ್ರತಿನಿಧಿಯಾಗಿ ಶ್ರೀ ಜೀವೇಂದ್ರಕುಮಾರ್ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು ಮತ್ತು ಶ್ರವಣಬೆಳಗೊಳದ ಪೂಜ್ಯ ಸ್ವಾಮಿಜಿಯವರ ಆಶೀರ್ವಚನ ಮತ್ತು ಸಂದೇಶವನ್ನು ವಾಚನ ಮಾಡಿದರು. ತಲಕಾಡು ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಕೆಂಪಯ್ಯ ಅವರೂ ಸಭೆಯಲ್ಲಿ ಉಪಸ್ಥಿತರಿದ್ದರು. ಕಾಲೇಜು ಶಿಕ್ಷಣ ಇಲಾಖೆ ವಿಶೇಷಾಧಿಕಾರಿ ಡಾ. ಹೇಮಚಂದ್ರ ಮತ್ತು ವಿಶೇಷ ಅಧಿಕಾರಿ ಶ್ರೀ ನಾಗೇಂದ್ರ ಪ್ರಸಾದ್ ಅವರುಗಳು ವಿದ್ಯಾರ್ಥಿಗಳಿಗೆ ವಿಚಾರ ಸಂಕಿರಣದ ವಿಷಯದ ಬಗ್ಗೆ ಗಮನ ಹರಿಸಬೇಕೆಂದು ಕಿವಿ ಮಾತು ನುಡಿದರು. ತಲಕಾಡಿನ ಪದವಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಎಸ್.ವಿ.ಮುರಳೀಧರ ಅವರು ವಂದನಾರ್ಪಣೆ ಮಾಡಿದರು.

ಡಾ. ಎನ್. ಯೋಗೇಶ್ ಅವರು ಕಾರ್ಯಕ್ರಮ ನಿರೂಪಣೆ ಮಾಡಿದರು.

ವಿಚಾರ ಸಂಕಿರಣದ ಮೊದಲ ಗೋಷ್ಠಿಯು ಮಧ್ಯಾಹ್ನ 12.30ಕ್ಕೆ ಪ್ರಾರಂಭವಾಯಿತು. 'ಗಂಗರ ಕಾಲದ ಜೈನಶಾಸನಗಳು' ಎಂಬ ವಿಷಯವನ್ನು ಕುರಿತು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಡಾ. ಎಂ.ಜಿ.ಮಂಜುನಾಥ್ ಅವರು ಪ್ರಬಂಧ ಮಂಡಿಸಿದರು. ಗಂಗರ ಕಾಲದ ಶಾಸನಗಳ ವಿಷಯಗಗಳನ್ನು ವಿಭಾಗ ಮಾಡಿ ತಿಳಿಸುತ್ತಾ ಗಂಗರು ಮತ್ತು ಜೈನಧರ್ಮದ ಸಂಬಂಧವನ್ನು ವಿಶದಪಡಿಸಿದರು. ಗಂಗರ ಮೂಲನೆಲೆಯಾದ ಪೇರೂರಿನ ವಿವಿಧ ಹೆಸರುಗಳನ್ನು ತಿಳಿಸುವ ಶಾಸನಗಳ ಪಟ್ಟಿಯನ್ನು ಹಾಗೂ ಗಂಗರ ಕಾಲದ ಪ್ರಾಚೀನ ಜೈನಶಾಸನಗಳ ಬಗೆಗೆ ವಿವರವಾದ ವಿಷಯವನ್ನು ತಿಳಿಸಿದರು.

'ಚಾವುಂಡರಾಯ ಪುರಾಣವನ್ನು' ಕುರಿತು ವಿಚಾರ ಮಂಡಿಸಿದ ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗದ ಅಧ್ಯಾಪಕಿಯಾದ ಡಾ. ಎಂ.ಎಸ್. ಪದ್ಮ ಅವರು ಚಾವುಂಡರಾಯ ಪುರಾಣವನ್ನು ಕುರಿತು ಮಾತನಾಡುತ್ತಾ; ಭಾರತೀಯ ಪರಂಪರೆಯಲ್ಲಿ ಪುರಾಣಗಳಿಗೆ ವಿಶೇಷವಾದ ಸ್ಥಾನವಿದೆ. ಚಾವುಂಡರಾಯ ಪುರಾಣದ ಹಿರಿಮೆ ಇರುವುದೇ ಅದರ ಗದ್ಯಶೈಲಿಯಲ್ಲಿ. ಜನಸಾಮಾನ್ಯರಿಗೂ ತಿಳಿಯುವಂತೆ ಸಂಸ್ಕೃತದ ಮಹಾಪುರಾಣವನ್ನು 63 ಜನ ಶಲಾಕಾಪುರುಷರ ಚರಿತೆಯನ್ನು ಸಂಗ್ರಹವಾಗಿ ಗದ್ಯದಲ್ಲಿ ಹೇಳುವುದೇ ಅವನ ಉದ್ದೇಶವಾಗಿತ್ತು. ಚಾವುಂಡರಾಯ ಪುರಾಣವು ಅನುವಾದವಾಗಿಯೂ ಸ್ವತಂತ್ರ ಅಸ್ತಿತ್ವ, ಸತ್ವವುಳ್ಳ ಕನ್ನಡ ಸಾಹಿತ್ಯದ ಗ್ರಂಥಗಳಲ್ಲಿ ಒಂದೆನಿಸಿದೆ. ಚಾವುಂಡರಾಯನು ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಗದ್ಯಕಾರನೆಂಬ ಹಿರಿಮೆಗೆ, ಮನ್ನಣೆಗೆ ಪಾತ್ರನಾಗಿದ್ದಾನೆ ಎಂದು ತಿಳಿಸಿದರು.

ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಮಂಜುಳ ಅವರು 'ಗಂಗರ ಕಾಲದ ಜೈನ ಬಸದಿಗಳ' ಬಗ್ಗೆ ಮಾತನಾಡುತ್ತಾ ವಿಶೇಷವಾಗಿ ಮೈಸೂರು ಮತ್ತು ಮಂಡ್ಯ ಜಿಲ್ಲೆಯ ಬಸದಿಗಳು ಮತ್ತು ಆ ಎರಡೂ ಜಿಲ್ಲೆಗಳಲ್ಲಿನ ಎಲ್ಲಾ ಬಸದಿಗಳ ವಿಶೇಷತೆ, ಅವುಗಳಲ್ಲಿ ಉತ್ಖನನದಿಂದ ದೊರೆತ ಶಾಸನಗಳು ಹಾಗೂ ಆ ಶಾಸನಗಳಲ್ಲಿರುವ ವಿಶೇಷತೆಯನ್ನು ಕುರಿತು ಪ್ರಬಂಧ ಮಂಡನೆ ಮಾಡಿದರು.

ಡಾ.ಬಿ.ಎಲ್. ಶಶಿರೇಖ ಅವರು ಈ ಗೋಷ್ಠಿಯ ನಿರೂಪಣೆ ಮಾಡಿದರು.

ಮಧ್ಯಾಹ್ನ 3.30ಕ್ಕೆ ಎರಡನೇ ಗೋಷ್ಠಿಯು ಪ್ರಾರಂಭವಾಯಿತು. ಮೊದಲ ಪ್ರಬಂಧಕಾರರಾಗಿ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯದ ಡಾ. ಎನ್.ಎಸ್. ರಂಗರಾಜುರವರು ಗಂಗರ ಕಾಲದ ಜೈನ ನೆಲೆಗಳನ್ನು ಕುರಿತು ವಿಚಾರ ಮಂಡಿಸುತ್ತಾ ವಾಜಮಂಗಲ, ವರಕೋಡು ಮತ್ತು ವರುಣಾಗಳಲ್ಲಿ ನಡೆದ ಉತ್ಖನನಗಳು ಅದಲ್ಲದೆ ಮೈಸೂರಿನ ಸಮೀಪದಲ್ಲಿಯೇ ಇರುವ ಕುಮಾರಬೀಡುವಿನಲ್ಲಿ ಇದ್ದಂತಹ ಜೈನಪ್ರತಿಮೆಗಳನ್ನು ಸಂರಕ್ಷಿಸುವ ಪ್ರಯತ್ನವನ್ನು ಮಾಡಿದುದಾಗಿ ತಿಳಿಸಿದರು.

ಜೈನಶಾಸ್ತ್ರ ವಿಭಾಗದ ಅಧ್ಯಕ್ಷರಾದ ಪ್ರೊ.ವಿಜಯಕುಮಾರಿ ಎಸ್. ಕರಿಕಲ್ ಅವರು ಜೈನಧರ್ಮದ ತತ್ವಗಳ ಪ್ರಸ್ತುತತೆಯನ್ನು ಕುರಿತು ಮಾತನಾಡುತ್ತಾ ಜೈನಧರ್ಮ ಜಗತ್ತಿಗೆ ಕೊಟ್ಟಿರುವ ಎರಡು ಮುಖ್ಯತತ್ವಗಳೆಂದರೆ ಅಹಿಂಸೆ ಮತ್ತು ಅನೇಕಾಂತವಾದ. ಅಹಿಂಸೆಯು ಸಾರ್ವಕಾಲಿಕ ಸತ್ಯವಾಗಿದ್ದು ಇಂದಿಗೂ ಅದು ಪ್ರಸ್ತುತವಾಗಿದೆ ಎಂದರು. ಭಿನ್ನಭಿನ್ನ ದೃಷ್ಟಿಕೋನಗಳನ್ನು ಸಮನ್ವಯಗೊಳಿಸುವ ಅನೇಕಾಂತವಾದವು ದೇಶದ ಎಷ್ಟೋ ಸಮಸ್ಯೆಗಳಿಗೆ ಪರಿಹಾರ ನೀಡಬಲ್ಲದು ಎಂದು ಅಭಿಪ್ರಾಯ ಪಟ್ಟರು.

ಮುಂದಿನ ಪ್ರಬಂಧಕಾರರಾಗಿದ್ದ ಡಾ. ಎಂ.ಎಸ್. ಕೃಷ್ಣಮೂರ್ತಿ ನಿವೃತ್ತ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ ಮೈಸೂರು ವಿಶ್ವವಿದ್ಯಾನಿಲಯ, ಇವರು ತಲಕಾಡಿನಲ್ಲಿ ತಾವು ನಡೆಸಿದ ಪುರಾತತ್ವ ಉತ್ಖನನಗಳನ್ನು ಕುರಿತು ವಿಶದವಾಗಿ ತಿಳಿಸಿದರು. ಪವರ್ ಪಾಯಿಂಟ್ ಮೂಲಕ ಉತ್ಖನನದ ಛಾಯಾಚಿತ್ರಗಳನ್ನು ಪ್ರದರ್ಶಿಸಿ ಅದನ್ನು ವಿವರಿಸುವ ಮೂಲಕ ತಲಕಾಡಿನ ಪುರಾತತ್ವ ಇತಿಹಾಸದ ಮೇಲೆ ಬೆಳಕು ಚೆಲ್ಲಿದರು.

ಈ ಗೋಷ್ಠಿಯ ನಿರ್ವಹಣೆಯನ್ನು ಡಾ.ಶಾಂತಿಸಾಗರ ಶಿರಹಟ್ಟಿಯವರು ಮಾಡಿದರು.

ತಾ.03.02.2022 ಗುರುವಾರದಂದು ಈ ವಿಚಾರ ಸಂಕಿರಣದ ಮೂರನೇ ಗೋಷ್ಠಿಯು ಬೆಳಗ್ಗೆ 10.30ಕ್ಕೆ ಪ್ರಾರಂಭವಾಯಿತು. ಮೊದಲ ಪ್ರಬಂಧಕಾರರಾಗಿ ವಿಷಯ ಮಂಡಿಸಿದವರು ಶ್ರವಣಬೆಳಗೊಳದ ಪ್ರಾಕೃತ ವಿದ್ಯಾಪೀಠದ ಪ್ರವಾಚಕರಾದ ಡಾ.ಸಿ.ಪಿ. ಕುಸುಮರವರು. ಇವರು ಗಂಗರ ಕಾಲದ ಪ್ರಾಕೃತ ಸಾಹಿತ್ಯವನ್ನು ಕುರಿತು ಮಾತನಾಡಿದರು. ಗಂಗರ ಕಾಲವನ್ನು 4ನೇಶ. ದಿಂದ 10ನೇ ಶ. ಅಂತ್ಯದವರೆಗೆ ಎಂದು ಗುರುತಿಸಲಾಗಿದ್ದು ಗಂಗರ ಕಾಲವು ಪ್ರಾರಂಭವಾಗುವ ಹೊತ್ತಿಗಾಗಲೇ ಪ್ರಾಕೃತಭಾಷೆಯು 2000 ವರ್ಷಗಳಷ್ಟು ದೀರ್ಘ ಹಾದಿಯಲ್ಲಿ ಸಾಗಿ ಅದು ಅಪಭ್ರಂಶದ ಸ್ಥಿತಿಗೆ ತಲುಪಿತ್ತು. ಆದರೂ ಈ ಕಾಲದಲ್ಲಿ ಪ್ರಾಕೃತ ಸಾಹಿತ್ಯ ರಚನೆಯಾಗಿದೆ. ಗಂಗ ಸಾಮ್ರಾಜ್ಯದ ವ್ಯಾಪ್ತಿಯಲ್ಲಿಯೇ ಪ್ರಾಕೃತ ಕೃತಿಗಳು ರಚನೆಯಾಗಿರುವುದು ಕಂಡುಬರುತ್ತದೆ. ಕನಕನಂದ್ಯಾಚಾರ್ಯ ಮತ್ತು ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳು ಮಾತ್ರ ಗಂಗ ಸಾಮ್ರಾಜ್ಯದ ವ್ಯಾಪ್ತಿಯಲ್ಲಿ ಬರುತ್ತಾರೆ. ಗಂಗರು ರಾಷ್ಟ್ರಕೂಟರ ಸಾಮಂತರಾಗಿದ್ದರಿಂದ ದೂರಾನ್ವಯದ ದೃಷ್ಟಿಯಿಂದ ಕ್ರಿ.ಶ. 4ನೇಶ. ದಿಂದ 10ನೇ ಶ. ದ ಅಂತ್ಯದವರೆಗೆ ರಚಿತವಾದ ಪ್ರಾಕೃತಾಚಾರ್ಯರ ಕೃತಿಗಳನ್ನು ಇಲ್ಲಿ ಸಮಾವೇಶಗೊಳಿಸಿದ್ದೇನೆ ಎಂದು ತಿಳಿಸಿದರು.

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದ ಡಾ.ಜಿ.ಕರಿಯಪ್ಪನವರು ಸಿದ್ಧಪಡಿಸಿ ಕಳುಹಿಸಿಕೊಟ್ಟಿದ್ದ 'ಗಂಗರ ಕಾಲದ ಜೈನ ಬಸದಿಗಳು' ವಿಷಯ ಕುರಿತ ಪ್ರಬಂಧವನ್ನು ಡಾ. ಶಾಂತಿಸಾಗರ ಶಿರಹಟ್ಟಿಯವರು ಪ್ರಸ್ತುತ ಪಡಿಸಿದರು.

ಶ್ರವಣಬೆಳಗೊಳದ 'ಗೊಮ್ಮಟವಾಣಿ' ಪತ್ರಿಕೆಯ ಸಂಪಾದಕರಾದ ಶ್ರೀ.ಎಸ್.ಎನ್. ಅಶೋಕ್‌ಕುಮಾರ ಅವರು ಕಳುಹಿಸಿದ್ದ 'ಗಂಗರ ಕಾಲದ ಶ್ರವಣಬೆಳಗೊಳದ ಸ್ಮಾರಕಗಳು' ವಿಷಯದ ಲೇಖನವನ್ನು ಶ್ರೀಮತಿ ನಾಗರತ್ನ ಪ್ರಸನ್ನಕುಮಾರ್ ಅವರು ಮಂಡಿಸಿದರು.

ನಂತರ ಪತ್ರಾಗಾರ ಇಲಾಖೆಯ ನಿರ್ದೇಶಕರಾದ ಡಾ. ಗವಿಸಿದ್ದಯ್ಯ ಅವರು 'ಪತ್ರಾಗಾರ ಇಲಾಖೆಯ ಚಾರಿತ್ರಿಕ ದಾಖಲೆಗಳು ಮತ್ತು ಅದರ ಉಪಯೋಗವನ್ನು' ಕುರಿತು ಮಾತನಾಡಿದರು.

ನಾಲ್ಕನೆಯ ಗೋಷ್ಠಿಯು ಮಧ್ಯಾಹ್ನ 12.30ಕ್ಕೆ ಆರಂಭವಾಯಿತು. ಮೊದಲ ಪ್ರಬಂಧಕಾರರಾಗಿ ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ ನಿವೃತ್ತ ಅಧ್ಯಕ್ಷರಾದ ಪ್ರೊ.ಶುಭಚಂದ್ರ ಅವರು 'ತಲಕಾಡಿಗೆ ಪ್ರಧಾನಿ ಚಾವುಂಡರಾಯ ಮತ್ತು ಗಂಗರಾಜ ಇವರ ಕೊಡುಗೆಗಳು' ವಿಷಯವನ್ನು ಮಂಡಿಸಿದರು.

ಇತಿಹಾಸ ವಿಭಾಗದ ಪ್ರಾಧ್ಯಾಪಕರಾದ ಡಾ.ವೈ.ಹೆಚ್. ನಾಯಕವಾಡಿ ಅವರು 'ತಲಕಾಡಿನ ಗಂಗರ ಇತಿಹಾಸ ಇದುವರೆಗಿನ ಅಧ್ಯಯನ' ವಿಷಯವನ್ನು ಕುರಿತು ಪ್ರಬಂದ ಮಂಡಿಸಿದರು.

ಭಾರತೀಯ ಪುರಾತತ್ವ ಇಲಾಖೆ; ತಿರುಚಿಯ ಅಧೀಕ್ಷಕರಾದ ಡಾ. ಅರಣ್‌ರಾಜ್ ಅವರ ಗೈರುಹಾಜರಿಯಲ್ಲಿ 'ಗಂಗರ ಕಾಲದ ಎರಡು ಗೊಮ್ಮಟ ಶಿಲ್ಪಗಳು' ವಿಷಯವನ್ನು ಕುರಿತು ಡಾ. ಅರುಣ್‌ರಾಜ್ ಕಳಿಸಿದ ಸಂಕ್ಷಿಪ್ತ ವರದಿಯನ್ನು ಡಾ. ಎನ್.ಎಸ್.ರಂಗರಾಜು ಅವರು ವಾಚನ ಮಾಡಿದರು.

ಮಧ್ಯಾಹ್ನ 3.30ಕ್ಕೆ ಎರಡು ದಿನಗಳ ಈ ರಾಷ್ಟ್ರೀಯ ವಿಚಾರ ಸಂಕಿರಣದ ಸಮಾರೋಪ ಸಮಾರಂಭವು ಡಾ.ಎಂ.ಎಸ್. ಪದ್ಮ, ಡಾ.ಬಿ.ಎಲ್, ಶಶಿರೇಖ ಮತ್ತು ಡಾ. ಅರುಣಕುಮಾರಿಯವರ ಪ್ರಾರ್ಥನೆಯೊಂದಿಗೆ ಆರಂಭವಾಯಿತು.

ವೇದಿಕೆಯಲ್ಲಿ ಉಪಸ್ಥಿತರಿದ್ದ ಎಲ್ಲ ಗಣ್ಯಮಾನ್ಯ ಅತಿಥಿಗಳನ್ನು ತಲಕಾಡು ಪದವಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಎಸ್.ವಿ.ಮುರಳೀಧರ ಅವರು ಸ್ವಾಗತಿಸಿದರು.

ಸಮಾರೋಪ ನುಡಿಗಳನ್ನು ನಾಡಿನ ಖ್ಯಾತ ವಿದ್ವಾಂಸರಾದ ನಾಡೋಜ ಪ್ರೊ. ಹಂ.ಪ.ನಾಗರಾಜಯ್ಯನವರು ನುಡಿದರು. ತಲಕಾಡಿನ ಇತಿಹಾಸ ಮತ್ತು ಪ್ರಸಿದ್ಧ ಪುರುಷರನ್ನು ಕುರಿತು ತಿಳಿಸಿದರು.

ವಿಶೇಷ ಅತಿಥಿಗಳಾಗಿ ಆಗಮಿಸಿದ್ದ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರು ನಾಡಿನ ಪ್ರಸಿದ್ಧ ಚಲನಚಿತ್ರ ಮತ್ತು ರಂಗಭೂಮಿಯ ನಟರು ಮತ್ತು ನಿರ್ದೇಶಕರೂ ಆಗಿರುವ ಟಿ.ಎಸ್.ನಾಗಾಭರಣ ಅವರು ತಲಕಾಡಿನ ಇತಿಹಾಸವನ್ನು ಕುರಿತು ತಿಳಿಸಿದರು. ತಮಗೂ ಮತ್ತು ತಲಕಾಡಿಗೂ ಇರುವ ಸಂಬಂಧ ಮತ್ತು ತಮ್ಮ ಬಾಲ್ಯದ ಅನುಭವಗಳನ್ನು ನೆನಪು ಮಾಡಿಕೊಂಡರು.

ವಿಶೇಷ ಅತಿಥಿಗಳಾಗಿ ಆಗಮಿಸಿದ್ದ ಜಿಲ್ಲಾ ಉಸ್ತುವಾರಿ ಸಚಿವ ಎಸ್. ಟಿ. ಸೋಮಶೇಖರ್ ಅವರು ತಲಕಾಡಿನಲ್ಲಿ ಆಯೋಜಿಸಿರುವ ಈ ವಿಚಾರ ಸಂಕಿರಣವು ತಲಕಾಡಿನ ಗಂಗರು ಹಾಗೂ ಚಾವುಂಡರಾಯರ ಬಗ್ಗೆ ವಿದ್ಯಾರ್ಥಿಗಳಿಗೆ ಸಮಗ್ರ ಮಾಹಿತಿ ತಿಳಿಸಲು ಅತ್ಯಂತ ಪ್ರಸ್ತುತವಾಗಿದೆ ಎಂದು ತಿಳಿಸಿದರು. ಐತಿಹಾಸಿಕ ಹಿನ್ನೆಲೆಯುಳ್ಳ ತಲಕಾಡಿನ ಇತಿಹಾಸವನ್ನು ಪ್ರತಿಯೊಬ್ಬರೂ ತಿಳಿಯಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಅಶ್ವಿನ್‌ಕುಮಾರ ಅವರು ಮಾತನಾಡುತ್ತಾ ತಲಕಾಡನ್ನು ಪ್ರವಾಸಿ ತಾಣವನ್ನಾಗಿ ರೂಪಿಸಲಾಗುತ್ತಿದೆ. ತಲಕಾಡಿನಲ್ಲಿ ಇತಿಹಾಸ ವಿಷಯಕ್ಕೆ ಸಂಬಂಧಿಸಿದ ವಸ್ತು ಸಂಗ್ರಹಾಲಯವೊಂದನ್ನು ಸ್ಥಾಪಿಸಿ, ಆ ಮೂಲಕ ಜನರಿಗೆ ಐತಿಹಾಸಿಕ ಮಾಹಿತಿ ಒದಗಿಸುವ ಪ್ರಯತ್ನ ಮಾಡಲಾಗುವುದು ಎಂದರು.

ಮುಖ್ಯ ಅತಿಥಿಗಳಾಗಿ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಪ್ರೊ.ಆರ್.ಶಿವಪ್ಪ ಅವರು, ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗದ ನಿವೃತ್ತ ಅಧ್ಯಕ್ಷರಾದ ಡಾ.ಪಿ.ಪದ್ಮಾವತಿ ಅವರು, ಶ್ರೀಕ್ಷೇತ್ರ ಶ್ರವಣಬೆಳಗೊಳದ ಪ್ರತಿನಿಧಿಯಾಗಿ ಆಗಮಿಸಿದ್ದ ಬಾಹುಬಲಿ ಪ್ರಾಕೃತ ವಿದ್ಯಾಪೀಠದ ಡಾ. ಮುರಳಿಯವರು, ಭಾರತೀಯ ಜೈನಮಿಲನ್‌ನ ರಾಷ್ಟ್ರೀಯ ಉಪಾಧ್ಯಕ್ಷರಾಗಿರುವ ಎನ್. ಪ್ರಸನ್ನಕುಮಾರ್ ಅವರು, ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಕೆಂಪಯ್ಯ ಅವರು, ತಹಸೀಲ್ದಾರ್‌ರಾದ ಬಿ.ಗಿರಿಜಾ ಅವರು, ಹಾಗೂ ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗದ ಅಧ್ಯಕ್ಷರಾದ ಪ್ರೊ. ವಿಜಯಕುಮಾರಿ ಎಸ್. ಕರಿಕಲ್ ಮತ್ತಿತರರು ಉಪಸ್ಥಿತರಿದ್ದರು.

ಈ ಸಮಾರೋಪ ಸಮಾರಂಭದ ನಿರೂಪಣೆಯನ್ನು ಡಾ.ಎನ್.ಎಸ್. ಅನ್ನಪೂರ್ಣ ಅವರು ನಿರ್ವಹಿಸಿದರು. ವಂದನಾರ್ಪಣೆಯನ್ನು ಡಾ. ನೀಲಗಿರಿ ತಳವಾರ ಅವರು ನೆರವೇರಿಸಿದರು.

ರಾಷ್ಟ್ರಗೀತೆಯ ಸಮೂಹ ಗಾಯನದೊಂದಿಗೆ ಕಾರ್ಯಕ್ರಮ ಸಂಪನ್ನವಾಯಿತು.

8/3/22

ಪ್ರೊ. ವಿಜಯಕುಮಾರಿ.ಎಸ್.ಕರಿಕಲ್

ಅಧ್ಯಕ್ಷರು

ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ

Chairperson

Department of Studies in Jainology Prakrits

Manasagangotri, Mysuru - 06


Jwalamala


ಮೈಸೂರು ವಿಶ್ವವಿದ್ಯಾನಿಲಯ
(IQAC)


(IQAC)
Jwalamala


(IQAC)
Jwalamala


Jwalamala

## ಮೈಸೂರು ವಿಶ್ವವಿದ್ಯಾನಿಲಯ

**ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ ಹಾಗೂ ಶ್ರೀ ದಿಗಂಬರ ಜೈನ ಮಠ, ಶ್ರವಣಬೆಳಗೊಳ**

ಇವರ ಸಂಯುಕ್ತಾಶ್ರಯದಲ್ಲಿ

ಸಹಯೋಗ :

**ಪುರಾತತ್ತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು**

ಹಾಗೂ

**ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಲಕಾಡು**

ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ

# ತಲಕಾಡಿನ ಗಂಗರು ಮತ್ತು ಚಾವುಂಡರಾಯ

ದಿನಾಂಕ : 02-02-2022 ಮತ್ತು 03-02-2022

ಸ್ಥಳ : ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಲಕಾಡು

**ಎಲ್ಲರಿಗೂ ಆತ್ಮೀಯ ಸ್ವಾಗತ**

**ಪ್ರೊ. ವಿಜಯಕುಮಾರಿ ಎಸ್. ಕರಿಕಲ್**
ಅಧ್ಯಕ್ಷರು
ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ

**ಪ್ರೊ. ಆರ್. ಶಿವಪ್ಪ**
ಕುಲಸಚಿವರು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಈ ಕಾರ್ಯಕ್ರಮವು ಕೋವಿಡ್–19 ನಿಯಮಕ್ಕೆ ಒಳಪಟ್ಟಿರುತ್ತದೆ

## ಉದ್ಘಾಟನಾ ಸಮಾರಂಭ

ದಿನಾಂಕ 02-02-2022

ಸಮಯ ಬೆಳಗ್ಗೆ 10 ಗಂಟೆ

### ಪಾವನ ಸಾನ್ನಿಧ್ಯ

ಪರಮಪೂಜ್ಯ ಜಗದ್ಗುರು

**ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳು,** ಶ್ರೀ ಕ್ಷೇತ್ರ ಶ್ರವಣಬೆಳಗೊಳ

ಉದ್ಘಾಟನೆ

**ಶ್ರೀ ಎಸ್.ಟಿ. ಸೋಮಶೇಖರ್**

ಮಾನ್ಯ ಸಹಕಾರ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು,
ಕರ್ನಾಟಕ ಸರ್ಕಾರ, ಬೆಂಗಳೂರು

ಅಧ್ಯಕ್ಷತೆ

**ಪ್ರೊ. ಜಿ.ಹೇಮಂತಕುಮಾರ್**

ಮಾನ್ಯ ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು

### ಮುಖ್ಯ ಅತಿಥಿಗಳು

**ಶ್ರೀ ವಿ. ಶ್ರೀನಿವಾಸ ಪ್ರಸಾದ್**

ಮಾನ್ಯ ಸಂಸತ್ ಸದಸ್ಯರು, ಚಾಮರಾಜನಗರ ಲೋಕಸಭಾ ಕ್ಷೇತ್ರ

**ಶ್ರೀ ಅಶ್ವಿನ್‌ಕುಮಾರ್**

ಮಾನ್ಯ ಶಾಸಕರು ತಿ.ನರಸೀಪುರ ಕ್ಷೇತ್ರ

**ಶ್ರೀ ಪಿ. ಪ್ರದೀಪ್**

ಆಯುಕ್ತರು, ತಾಂತ್ರಿಕ ಮತ್ತು ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು

**ಶ್ರೀಮತಿ ಬಿ.ಆರ್. ಪೂರ್ಣಿಮಾ** ಭಾ.ಆ.ಸೇ.

ಆಯುಕ್ತರು ಪುರಾತತ್ತ್ವ ಮತ್ತು ಪರಂಪರೆ ಇಲಾಖೆ, ಮೈಸೂರು

**ಶ್ರೀ ಎಸ್. ಮಲ್ಲೇಶ್ವರಪ್ಪ**

ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು

**ಶ್ರೀ ಜಿ. ಕೆಂಪಯ್ಯ**

ಅಧ್ಯಕ್ಷರು ಗ್ರಾಮ ಪಂಚಾಯಿತಿ, ತಲಕಾಡು

### ಉಪಸ್ಥಿತಿ

**ಪ್ರೊ. ವಿಜಯಕುಮಾರಿ ಎಸ್. ಕರಿಕಲ್**

ಅಧ್ಯಕ್ಷರು, ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ ಮೈ.ವಿ.ವಿ. ಮೈಸೂರು

**ಶ್ರೀ ಎಸ್.ವಿ. ಮುರಳೀಧರ**

ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಲಕಾಡು

ನಿರೂಪಣೆ : ಡಾ. ಕೆ. ಪಿ. ಲಲಿತಾ

# ತಲಕಾಡಿನ ಗಂಗರು ಮತ್ತು ಚಾವುಂಡರಾಯ ರಾಷ್ಟ್ರೀಯ ವಿಚಾರ ಸಂಕಿರಣ

## ಗೋಷ್ಠಿ - 1

ದಿನಾಂಕ 02-02-2022, ಸಮಯ 12-00 ರಿಂದ 1-45

ನಿರೂಪಣೆ : ಡಾ. ಅರುಣಕುಮಾರಿ

| ವಿದ್ವಾಂಸರು | ವಿಷಯ |
|---|---|
| **ಡಾ. ಎಂ.ಜಿ. ಮಂಜುನಾಥ**<br>ನಿರ್ದೇಶಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ | ಗಂಗರ ಕಾಲದ ಜೈನ ಶಾಸನಗಳು |
| **ಡಾ. ಎಂ.ಎಸ್. ಪದ್ಮ**<br>ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ ಮೈಸೂರು ವಿಶ್ವವಿದ್ಯಾನಿಲಯ | ಚಾವುಂಡರಾಯ ಪುರಾಣ |
| **ಡಾ. ಜಿ. ಕರಿಯಪ್ಪ**<br>ಇತಿಹಾಸ ಮತ್ತು ಪ್ರಾಚೀನ ಪುರಾತತ್ತ್ವ ವಿಭಾಗ ಮೈಸೂರು ವಿಶ್ವವಿದ್ಯಾನಿಲಯ | ಗಂಗರ ಕಾಲದ ಜೈನ ಶಿಲ್ಪಗಳು |

ಊಟದ ವಿರಾಮ : ಮಧ್ಯಾಹ್ನ 2-00 ರಿಂದ 3-00

## ಗೋಷ್ಠಿ - 2

ಸಮಯ 3-00 ರಿಂದ 4-45

ನಿರೂಪಣೆ : ಡಾ. ಶಾಂತಿಸಾಗರ ಶಿರಹಟ್ಟಿ

| ವಿದ್ವಾಂಸರು | ವಿಷಯ |
|---|---|
| **ಡಾ.ಎಸ್.ಎಸ್.ರಂಗರಾಜು**<br>ನಿವೃತ್ತ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ ಮೈಸೂರು ವಿಶ್ವವಿದ್ಯಾನಿಲಯ | ಗಂಗರ ಕಾಲದ ಜೈನ ನೆಲೆಗಳು |
| **ಡಾ. ಎಂ.ಎಸ್. ಕೃಷ್ಣಮೂರ್ತಿ**<br>ನಿವೃತ್ತ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ ಮೈಸೂರು ವಿಶ್ವವಿದ್ಯಾನಿಲಯ | ತಲಕಾಡಿನಲ್ಲಿ ಪುರಾತತ್ತ್ವ ಉತ್ಖನನಗಳು |
| **ಡಾ.ವಿಜಯಕುಮಾರಿ ಎಸ್.ಕರಿಕಲ್**<br>ಅಧ್ಯಕ್ಷರು<br>ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ | ಜೈನಧರ್ಮ ತತ್ತ್ವಗಳು: ಪ್ರಸ್ತುತತೆ |

## ಗೋಷ್ಠಿ - 3

ದಿನಾಂಕ 03-02-2022, ಸಮಯ 10-00 ರಿಂದ 11-45

ನಿರೂಪಣೆ : ಡಾ. ಶಶಿರೇಖ ಜಿ. ಎಂ.

| ವಿದ್ವಾಂಸರು | ವಿಷಯ |
|---|---|
| **ಡಾ. ಮಂಜುಳ**<br>ಸಹಾಯಕ ನಿರ್ದೇಶಕರು, ಪ್ರಾಚ್ಯವಸ್ತು ಇಲಾಖೆ, ಕರ್ನಾಟಕ ಸರ್ಕಾರ | ಗಂಗರ ಕಾಲದ ಜೈನ ಬಸದಿಗಳು |
| **ಶ್ರೀ ಎಸ್.ಎನ್.ಅಶೋಕಕುಮಾರ್**<br>ಸಂಪಾದಕರು, ಗೊಮ್ಮಟವಾಣಿ ಪತ್ರಿಕೆ ಶ್ರವಣಬೆಳಗೊಳ | ಗಂಗರ ಕಾಲದ ಶ್ರವಣ ಬೆಳಗೊಳದ ಸ್ಮಾರಕಗಳು |
| **ಡಾ. ಸಿ.ಪಿ. ಕುಸುಮ**<br>ಪ್ರವಾಚಕರು, ಬಾಹುಬಲಿ ಪ್ರಾಕೃತ ವಿದ್ಯಾಪೀಠ, ಶ್ರವಣಬೆಳಗೊಳ | ಗಂಗರ ಕಾಲದಲ್ಲಿ ಪ್ರಾಕೃತ ಸಾಹಿತ್ಯ |

## ಗೋಷ್ಠಿ - 4

ಸಮಯ 12-00 ರಿಂದ 1-45

ನಿರೂಪಣೆ : ಡಾ. ಅಭಿಜಿತ್ ಅಲಗೌಡರ್

| ವಿದ್ವಾಂಸರು | ವಿಷಯ |
|---|---|
| **ಶ್ರೀ ಶುಭಚಂದ್ರ**<br>ನಿವೃತ್ತ ಅಧ್ಯಕ್ಷರು, ಜೈನಶಾಸ್ತ್ರ ಮತ್ತು ಪ್ರಾಕೃತ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ | ತಲಕಾಡಿಗೆ ಪ್ರಧಾನಿ ಚಾವುಂಡರಾಯ ಮತ್ತು ಗಂಗರಾಜ ಇವರ ಕೊಡುಗೆಗಳು |
| **ಡಾ. ವೈ.ಹೆಚ್. ನಾಯಕವಾಡಿ**<br>ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ | ತಲಕಾಡಿನ ಗಂಗರ ಇತಿಹಾಸ ಇದುವರೆಗಿನ ಅಧ್ಯಯನ |
| **ಡಾ. ಅರುಣರಾಜ್**<br>ಅಧೀಕ್ಷಕರು, ಭಾರತೀಯ ಪುರಾತತ್ತ್ವ ಇಲಾಖೆ, ತಿರುಚಿ | ಗಂಗರ ಕಾಲದ ಎರಡು ಗೊಮ್ಮಟ ಶಿಲ್ಪಗಳು |

# ಸಮಾರೋಪ ಸಮಾರಂಭ

ದಿನಾಂಕ 03-02-2022 ಸಮಯ ಅಪರಾಹ್ನ 3.00 ಗಂಟೆ

## ಪಾವನ ಸಾನ್ನಿಧ್ಯ

ಪರಮಪೂಜ್ಯ ಜಗದ್ಗುರು

**ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳು, ಶ್ರೀ ಕ್ಷೇತ್ರ ಶ್ರವಣಬೆಳಗೊಳ**

ಅಧ್ಯಕ್ಷತೆ
**ಶ್ರೀ ಅಶ್ವಿನ್‌ಕುಮಾರ್ ಎಂ.**
ಮಾನ್ಯ ಶಾಸಕರು, ಟಿ. ನರಸೀಪುರ ವಿಧಾನಸಭಾ ಕ್ಷೇತ್ರ

ಸಮಾರೋಪ ನುಡಿ
**ನಾಡೋಜ, ಪ್ರೊ.ಹಂ.ಪ. ನಾಗರಾಜಯ್ಯ**
ಹಿರಿಯ ಸಾಹಿತಿಗಳು, ಬೆಂಗಳೂರು

ವಿಶೇಷ ಅತಿಥಿ
**ಶ್ರೀ ಟಿ.ಎಸ್. ನಾಗಾಭರಣ**
ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

## ಮುಖ್ಯ ಅತಿಥಿಗಳು

**ಪ್ರೊ. ಆರ್. ಶಿವಪ್ಪ**
ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**ಪ್ರೊ. ಈ. ಸಿ. ವೀರಭದ್ರಯ್ಯ**
ಜಂಟಿ ನಿರ್ದೇಶಕರು, ಪ್ರಾದೇಶಿಕ ಕಾಲೇಜು ಶಿಕ್ಷಣ ಇಲಾಖೆ, ಮೈಸೂರು

## ಉಪಸ್ಥಿತಿ :

**ಪ್ರೊ. ವಿಜಯಕುಮಾರಿ ಎಸ್. ಕರಿಕಲ್**
ಅಧ್ಯಕ್ಷರು, ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ , ಮೈಸೂರು ವಿಶ್ವವಿದ್ಯಾನಿಲಯ ಮೈಸೂರು

**ಶ್ರೀ ಎನ್. ಪ್ರಸನ್ನಕುಮಾರ್**
ರಾಷ್ಟ್ರೀಯ ಉಪಾಧ್ಯಕ್ಷರು,
ಭಾರತೀಯ ಜೈನ್ ಮಿಲನ್, ಮೈಸೂರು

**ಡಾ. ನೀಲಗಿರಿ ತಳವಾರ**
ನಿವೃತ್ತ ಕನ್ನಡ ಪ್ರಾಧ್ಯಾಪಕರು,
ಮೈಸೂರು ವಿಶ್ವವಿದ್ಯಾನಿಲಯ

**ಡಾ.ಪಿ.ಪದ್ಮಾವತಿ**
ನಿವೃತ್ತ ಅಧ್ಯಕ್ಷರು,
ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ

## ಸಲಹಾ ಸಮಿತಿ

ಪ್ರೊ. ಎಂ.ಎಸ್. ಕೃಷ್ಣಮೂರ್ತಿ, ಪ್ರೊ. ಎನ್.ಎಸ್.ರಂಗರಾಜು, ಪ್ರೊ. ಎನ್.ಎಸ್. ತಾರಾನಾಥ್, ಪ್ರೊ. ಶುಭಚಂದ್ರ, ಪ್ರೊ. ಎಂ.ಜಿ. ಮಂಜುನಾಥ್, ಶ್ರೀ ಪ್ರಸನ್ನಕುಮಾರ್, ಪ್ರೊ. ನೀಲಗಿರಿ ತಳವಾರ, ಪ್ರೊ. ವೈ.ಹೆಚ್.ನಾಯಕವಾಡಿ, ಡಾ. ಪಿ. ಪದ್ಮಾವತಿ

ನಿರೂಪಣೆ : ಡಾ. ಎನ್. ಎಸ್.ಅನ್ನಪೂರ್ಣ

ಈ ಕಾರ್ಯಕ್ರಮವು ಕೋವಿಡ್-19 ನಿಯಮಕ್ಕೆ ಒಳಪಟ್ಟಿರುತ್ತದೆ

ಮೈಸೂರು ವಿಶ್ವವಿದ್ಯಾನಿಲಯ
ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ
ಮಾನಸಗಂಗೋತ್ರಿ, ಮೈಸೂರು
(4.0ಸ್ಕೇಲ್‌ನ 3.47 ಸಿಜಿಪಿಎಯೊಂದಿಗೆ ನ್ಯಾಕ್‌ನಿಂದ ಮರು ಮಾನ್ಯತೆ ಪಡೆದಿದೆ)
(ಎನ್ ಐಆರ್‌ಎಫ್-2020 ವಿಶ್ವವಿದ್ಯಾನಿಲಯ ವಿಭಾಗದಲ್ಲಿ 27ನೇ ಸ್ಥಾನ ಮತ್ತು ಒಟ್ಟಾರೆ ವಿಭಾಗದಲ್ಲಿ 47ನೇ ಸ್ಥಾನ)

ಸಂಖ್ಯೆ: MGJP/ 57 / 2021-22 ದಿನಾಂಕ: 31-8-2021

ಗೆ,

ಪ್ರೊ. ಜಿ. ಹೇಮಂತಕುಮಾರ
ಮಾನ್ಯ ಕುಲಪತಿಗಳು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಸನ್ಮಾನ್ಯರೆ,
ವಂದನೆಗಳು

ವಿಷಯ: "ತಲಕಾಡಿನ ಗಂಗರು ಮತ್ತು ಚಾವುಂಡರಾಯ" ವಿಚಾರ ಸಂಕಿರಣದ ಬಗೆಗೆ
ಉಲ್ಲೇಖ: 1. ಜಿಎಲ್4/358 (ಎ)/2012-13 ದಿನಾಂಕ: 22.06.2021

ಮೇಲೆ ಕಾಣಿಸಿದ ವಿಷಯ ಹಾಗೂ ಉಲ್ಲೇಖದನ್ವಯ ತಲಕಾಡಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಜೈನಶಾಸ್ತ್ರ ಹಾಗೂ ಪ್ರಾಕೃತ ಅಧ್ಯಯನ ವಿಭಾಗ ಹಾಗೂ ಶ್ರವಣಬೆಳಗೊಳದ ಜೈನಮಠ ಇವುಗಳ ಸಂಯುಕ್ತ ಆಶ್ರಯದಲ್ಲಿ "ತಲಕಾಡಿನ ಗಂಗರು ಮತ್ತು ಚಾವುಂಡರಾಯ" ಎಂಬ ವಿಷಯ ಕುರಿತು ವಿಚಾರ ಸಂಕಿರಣ ಏರ್ಪಡಿಸಲು ಪ್ರಸ್ತಾಪಿಸಲಾಗಿತ್ತು (ಅಂದಿನ ವಿಭಾಗ ಮುಖ್ಯಸ್ಥರಾಗಿದ್ದ ಪ್ರೊ. ಎಸ್.ಎಂ. ತಳವಾರ) ತಾವು ತಾತ್ವಿಕವಾಗಿ ಒಪ್ಪಿಗೆ ಕೊಟ್ಟಿದ್ದಾಗಿ ತಿಳಿಯಿತು. ಕೋವಿಡ್‌ನ ಅನಿವಾರ್ಯ ಕಾರಣದಿಂದಾಗಿ ಕಾರ್ಯಕ್ರಮವನ್ನು ಮುಂದೂಡುವಂತೆ ಸೂಚಿಸಿ ಕುಲಸಚಿವರಿಂದ ಪತ್ರ ಬಂದಿತ್ತು.

ಈಗ ಕೋವಿಡ್‌ನ ಕರಿನೆರಳು ಕಡಿಮೆ ಆಗಿರುವುದರಿಂದ ಬರುವ ನವಂಬರ್‌ನಲ್ಲಿ ಕಾರ್ಯಕ್ರಮ ಏರ್ಪಡಿಸಲು ಯೋಚಿಸುತ್ತಿದ್ದೇವೆ. ಪೂಜ್ಯ ಶ್ರೀ ಚಾರುಕೀರ್ತಿ ಭಟಾರಕರ ಆಶಯವೂ ಇದೇ ಆಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ರಾಷ್ಟ್ರೀಯ ವಿಚಾರ ಸಂಕಿರಣಕ್ಕೆ ಅವಶ್ಯವಿರುವ, 1,30,000/- ರೂಪಾಯಿಗಳನ್ನು ಮಂಜೂರು ಮಾಡಬೇಕಾಗಿ ವಿನಂತಿ. ಮಿಕ್ಕ ವೆಚ್ಚವನ್ನು ಶ್ರೀಮಠ ಭರಿಸುತ್ತದೆ.

ದಯಮಾಡಿ ವಿಭಾಗದ ಶೈಕ್ಷಣಿಕ ಬೆಳವಣಿಗೆಯ ದೃಷ್ಟಿಯಿಂದ ಈ ಯೋಜನೆಗೆ ಮಂಜೂರಾತಿ ನೀಡಬೇಕಾಗಿ ವಿನಂತಿ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸದ

ಪ್ರೊ. ವಿಜಯಕುಮಾರಿ.ಎಸ್.ಕರಿಕಲ್
ಅಧ್ಯಕ್ಷರು

ದೂರವಾಣಿ ಸಂಖ್ಯೆ : 2419209/2419361
ಫ್ಯಾಕ್ಸ್: 0821-2419363/2419301

e-mail : registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ: 1916

ವಿಶ್ವವಿದ್ಯಾನಿಲಯಕಾರ್ಯಸೌಧ,
ಕ್ರಾಫರ್ಡ್ ಭವನ, ಮೈಸೂರು-570005

ವಿಷಯ:- ರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಲು ಅನುಮತಿ ಹಾಗೂ ಹಣ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ: ಅಧ್ಯಕ್ಷರು, ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ ಮಾನಸಗಂಗೋತ್ರಿ, ಮೈಸೂರು, ಇವರ ಪತ್ರ ಸಂಖ್ಯೆ: **MGJP/57/2021-22** ದಿನಾಂಕ: 31.08.2021

******

## ಆದೇಶ ಸಂಖ್ಯೆ: ಜಿಎಲ್4/07/2015-16, ದಿನಾಂಕ. 27ನೇ ಸೆಪ್ಟೆಂಬರ್ 2021

ಮಾನ್ಯ ಕುಲಪತಿಯವರ ಅನುಮೋದನೆಯ ಮೇರೆಗೆ, ಅಧ್ಯಕ್ಷರು, ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ ಮಾನಸಗಂಗೋತ್ರಿ, ಮೈಸೂರು ಇವರು ವಿಶ್ವವಿದ್ಯಾನಿಲಯದ ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ ಹಾಗೂ ಶ್ರವಣಬೆಳಗೊಳದ ಜೈನಮಠ ಇವರ ಸಂಯುಕಾಶ್ರಯದಲ್ಲಿ ನವೆಂಬರ್ ಮಾಹೆಯಲ್ಲಿ ತಲಕಾಡಿನಲ್ಲಿ "ತಲಕಾಡಿನ ಗಂಗರು ಮತ್ತು ಚಾವುಂಡರಾಯ" ಎಂಬ ವಿಷಯವನ್ನು ಕುರಿತು ಒಂದು ದಿನದ ವಿಚಾರ ರಾಷ್ಟ್ರೀಯ ಸಂಕಿರಣವನ್ನು ಆಯೋಜಿಸಲು ಅನುಮತಿಸಿ, ಈ ಕಾರ್ಯಕ್ರಮದ ಖರ್ಚು ವೆಚ್ಚಗಳಿಗಾಗಿ ರೂ, 1,30,000/-(ಒಂದು ಲಕ್ಷದ ಮೂವತ್ತು ಸಾವಿರ ರೂ.ಗಳು ಮಾತ್ರ) ಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ಈ ಮೊತ್ತವನ್ನು ನಿಯಮಾನುಸಾರ ಡಿ.ಸಿ ಹುಂಡಿಯ ಮೂಲಕ ಪಾವತಿಸಲು ಅನುಮತಿ ನೀಡಲಾಗಿದೆ.

ಮೇಲ್ಕಂಡ ವೆಚ್ಚವನ್ನು 2021-22 ನೇ ಸಾಲಿನ ವಿಭಾಗದ "ವಿಚಾರಗೋಷ್ಠಿ ಮತ್ತು ಸಮ್ಮೇಳನ-148" ಶೀರ್ಷಿಕೆಯಿಂದ ರೂ, 25,000/-ಗಳನ್ನು ಮತ್ತು ಇನ್ನುಳಿದ ರೂ,1,05,000/-ಗಳನ್ನು "ಸಹೋದ್ಯಮ ಕೋರ್ಸುಗಳು-46 ರ ಇತರೆ ವೆಚ್ಚ-189" ಶೀರ್ಷಿಕೆಯಿಂದ ಭರಿಸತಕ್ಕದ್ದು.

ಕುಲಸಚಿವರಿಂದ ಕರಡು ಅನುಮೋದಿಸಿದೆ

ಆದೇಶದ ಮೇರೆಗೆ

ಉಪಕುಲಸಚಿವ(ಸಾಮಾನ್ಯ)

28/09/21

ಗೆ

1. ಅಧ್ಯಕ್ಷರು, ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ ಮಾನಸಗಂಗೋತ್ರಿ, ಮೈಸೂರು
2. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಅಪರ ನಿರ್ದೇಶಕರು, ಕರ್ನಾಟಕ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ ಪ್ರಾಂತೀಯ ಕಛೇರಿ, ಮೈಸೂರು ವಿಭಾಗ, ಪರೀಕ್ಷಾ ಭವನ ಕಟ್ಟಡ, ಕ್ರಾಫರ್ಡ್ ಹಾಲ್ ಹಿಂಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
4. ಮಾನ್ಯ ಕುಲಪತಿ/ಕುಲಸಚಿವ/ಹಣಕಾಸು ಅಧಿಕಾರಿಯವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ
5. ಕಛೇರಿ ಪ್ರತಿ

Telephone No : 2419677/2419361
www.uni-mysore.ac.
Fax : 0821-2419363/2419301

# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯಕಾರ್ಯಸೌಧ
ಕ್ರಾಫರ್ಡ್‌ಭವನ, ಅಂಚೆ ಪೆಟ್ಟಿಗೆ ಸಂಖ್ಯೆ 406
ಮೈಸೂರು-570 005

ಸಂಖ್ಯೆ: ಜಿಎಲ್8/205/2013-14

ದಿನಾಂಕ: 01.02.2022

ಅಧ್ಯಕ್ಷರು
ಜೈನಾಲಜಿ ಅಧ್ಯಯನ ವಿಭಾಗ
ಮಾನಸ ಗಂಗೋತ್ರಿ
ಮೈಸೂರು

ಮಾನ್ಯರೆ,

ವಿಷಯ: ವಾಹನ ನೀಡುವ ಬಗೆಗೆ.

ಉಲ್ಲೇಖ: ನಿಮ್ಮ ಪತ್ರ ಸಂಖ್ಯೆ: MGJP/191/2021-22 ದಿನಾಂಕ: 27.01.2022

****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಿತ ಪತ್ರಕ್ಕೆ ಸಂಬಂಧಿಸಿದಂತೆ, ದಿನಾಂಕ: 02 ಮತ್ತು 03ನೇ ಫೆಬ್ರವರಿ 2022ರಂದು **"ತಲಕಾಡಿನ ಗಂಗರಸರು ಮತ್ತು ಚಾವುಂಡರಾಯ"** ರಾಷ್ಟ್ರೀಯ ವಿಚಾರ ಸಂಕೀರ್ಣವನ್ನು ಶ್ರವಣಬೆಳಗೊಳ ಶ್ರೀಮಠ ಮತ್ತು ಜೈನಾಲಜಿ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ತಲಕಾಡು, ಇಲ್ಲಿ ಹಮ್ಮಿಕೊಂಡಿರುವ ಪ್ರಯುಕ್ತ ವಿಭಾಗದ ಸಿಬ್ಬಂದಿಗಳೊಂದಿಗೆ ತಲಕಾಡಿಗೆ ಹೋಗಿಬರಲು ವಿಶ್ವವಿದ್ಯಾನಿಲಯ ವಾಹನ ಟೆಂಪೊ ಟ್ರಾವೆಲ್ ಕೆ.ಎ-09 ಬಿ-8540ನ್ನು ಇಂಧನ ರಹಿತ ಹಾಗೂ ಚಾಲಕರೊಂದಿಗೆ ನಿಯೋಜಿಸಲಾಗಿದೆ.

ನಿಮ್ಮ ನಂಬುಗೆಯ,

ಉಪ ಕುಲಸಚಿವ(ಸಾಮಾನ್ಯ) 1/2/22
ಆಡಳಿತ
ಮೈ.ವಿ.ವಿ. ಮೈಸೂರು

4/2/22

ಪ್ರತಿ:

1. ಶ್ರೀ. ಮಹಮ್ಮದ್ ಜಬ್ಬೀವುಲ್ಲಾ ವಾಹನ ಚಾಲಕ(ತಾತ್ಕಾಲಿಕ), ಆಡಳಿತ ಶಾಖೆ, ಮೈ.ವಿ.ವಿ. ಮೈಸೂರು.
2. ಉಪಕುಲಸಚಿವ/ಸಹಾಯಕಕುಲಸಚಿವ/ಅಧೀಕ್ಷಕರು(ಸಾಮಾನ್ಯ), ಆಡಳಿತಶಾಖೆ, ಮೈ.ವಿ.ವಿ, ಮೈಸೂರು.
3. ಕಾರ್ಯನಿರ್ವಾಹಕರು ಜಿಎಲ್-5, ಆಡಳಿತಶಾಖೆ, ಮೈ.ವಿ.ವಿ, ಮೈಸೂರು-ಶ್ರೀ.ಮಹಮ್ಮದ್ ಜಬ್ಬೀವುಲ್ಲಾ ವಾಹನ ಚಾಲಕ(ತಾತ್ಕಾಲಿಕ), ಆಡಳಿತಶಾಖೆ, ಮೈ.ವಿ.ವಿ, ಮೈಸೂರು. ಇವರ ಮೇಲಿನ ದಿನಾಂಕಗಳಂದು ಈ ಕಛೇರಿಯ ಗೈರು ಹಾಜರಿಯನ್ನು ಅನ್ಯಕಾರ್ಯ ನಿಮಿತ್ತ ಎಂದು ಪರಿಗಣಿಸುವುದು.
4. ಕುಲಪತಿ/ಕುಲಸಚಿವ ಇವರುಗಳ ಆಪ್ತಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಕಛೇರಿ ಪ್ರತಿ.

Vehicle



ಮೈಸೂರಿನ ಶ್ರೀ ನಟರಾಜ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಚಿದಾನಂದ ಸ್ವಾಮೀಜಿ ಅವರ ಹುಟ್ಟುಹಬ್ಬಕ್ಕೆ ಮುಖಂಡರು ಶುಭಾಶಯ ಕೋರಿದರು. ಗ್ರಾಪಂ ಮಾಜಿ ಸದಸ್ಯರಾದ ಕಮಲಾ ನಟರಾಜ್, ಸರೋಜಾ ಸೋಮಣ್ಣ, ಮಾಜಿ ಸದಸ್ಯರಾದ ಶಶಿಕಲಾ, ಕೃಷ್ಣರಾಜೇಂದ್ರ, ಕೋ-ಆಪರೇಟಿವ್ ಬ್ಯಾಂಕ್‌ನ ಉಪಾಧ್ಯಕ್ಷ ಭಾಸ್ಕರ್, ಗೋಲ್ಡ್ ಸುರೇಶ್, ಜಿಟಿಡಿ ಅಭಿಮಾನಿ ಸಂಘದ ಅಧ್ಯಕ್ಷ ಕಾಮನಕೆರೆಹುಂಡಿ, ಎಚ್.ಗಿರೀಶ್‌ಗೌಡ ಹಾಜರಿದ್ದರು.



**ಮಂಜುನಾಥ್ ಅವರಿಗೆ ಅಭಿನಂದನೆ...**

ಕನ್ನಡ ಸಾಹಿತ್ಯ ಪರಿಷತ್ ಮೈಸೂರು ತಾಲ್ಲೂಕು ಘಟಕದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಎ.ಸಿ.ಮಂಜುನಾಥ್ ಅವರನ್ನು ಸಿದ್ದಲಿಂಗಪುರ ಗ್ರಾಮಸ್ಥರು ಅಭಿನಂದಿಸಿದರು. ಮುಖಂಡರಾದ ದಾಟಾ ಸೋಮಣ್ಣ, ರಾಮಶೆಟ್ಟಿ, ಗಂಗಾಧರ್, ಕಾಮನಕೆರೆಹುಂಡಿ ಅಶೋಕ್, ಕುಮಾರ್, ಬೆಲವತ್ತ ಗ್ರಾಮದ ಅಶೋಕ್, ಜಿಟಿಡಿ ಅಭಿಮಾನಿ ಸಂಘದ ಅಧ್ಯಕ್ಷ ಎಚ್.ಗಿರೀಶ್‌ಗೌಡ ಇತರರು ಹಾಜರಿದ್ದರು.



**ಸಂಗೀತ ಕಾರ್ಯಕ್ರಮ...**

ಮೈಸೂರಿನ ದಿವ್ಯದೀಪ ಅನಾಥ ಆಶ್ರಮದಲ್ಲಿ ಗಾ... ಸಂಸ್ಕೃತಿ ಇಲಾಖೆ ವತಿಯಿಂದ ಸುಗಮ ಸಂಗೀತ ... ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮಾ... ಭಾಗವಹಿಸಿದ್ದರು.

### ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅಭಿಮತ

# 'ತಲಕಾಡಿನ ಇತಿಹಾಸವನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಲಿ'

ತಿ.ನರಸೀಪುರ: ತಲಕಾಡಿನ ಗಂಗರು, ಚಾವುಂಡರಾಯರ ಬಗ್ಗೆ ಸಮಗ್ರ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ತಿಳಿಸುವ ನಿಟ್ಟಿನಲ್ಲಿ ವಿಚಾರ ಸಂಕಿರಣ ಪ್ರಸ್ತುತ ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅಭಿಪ್ರಾಯಪಟ್ಟರು.

ತಲಕಾಡಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ 'ತಲಕಾಡಿನ ಗಂಗರು ಮತ್ತು ಚಾವುಂಡರಾಯ' ಎರಡು ದಿನಗಳ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ತಲಕಾಡಿನ ಬಗ್ಗೆ, ಇತಿಹಾಸ ಪುರುಷರ ಬಗ್ಗೆ ಅಧ್ಯಯನ ಮಾಡಿದ ವಿದ್ವಾಂಸ ನಾಡೋಜ ಪ್ರೊ.ಹಂ.ಪ.ನಾಗರಾಜಯ್ಯ ಅವರು ವಿವರವಾಗಿ ತಿಳಿಸಿಕೊಟ್ಟಿದ್ದಾರೆ. ಹಂಪನಾ ಅವರ ಭಾಷಣ ಕೇಳುವ ಸುವರ್ಣ ಅವಕಾಶ ಸಿಕ್ಕಿದೆ. ಐತಿಹಾಸಿಕ ಹಿನ್ನೆಲೆಯುಳ್ಳ ತಲಕಾಡಿನ ಇತಿಹಾಸವನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು. ಸುವರ್ಣ ಬಳಿಕ ತಲಕಾಡಿನಲ್ಲಿ ಪಂಚಲಿಂಗ ದರ್ಶನ ಉತ್ಸವ ನಡೆಯುವುದು ಅವಿಸ್ಮರಣೀಯ ಎಂದು ಹೇಳಿದರು.

ಇಲ್ಲಿನ ಶಾಲಾ ಕಾಲೇಜುಗಳಲ್ಲಿನ ಸಮಸ್ಯೆಗಳ ಬಗ್ಗೆ ವಿದ್ಯಾರ್ಥಿಗಳು ನಮಗೆ ಮನವಿ ಮಾಡಿ ಗಮನಕ್ಕೆ ತಂದಿದ್ದಾರೆ. ಶಾಸಕರ ಜತೆಗೂಡಿ ಅಗತ್ಯ ಸೌಲಭ್ಯ ಒದಗಿಸಿ, ಶಾಲಾ, ಕಾಲೇಜು ಅಭಿವೃದ್ಧಿಗೆ ಒತ್ತು ನೀಡಲಾಗುವುದು. ಶೀಘ್ರದಲ್ಲೇ ಸಮಸ್ಯೆಗಳನ್ನು ಬಗೆಹರಿಸಲಾಗುವುದು ಎಂದು ಹೇಳಿದರು.

ನಂತರ ಕಾಲೇಜಿನಲ್ಲಿ ಆಯೋಜಿಸಿದ್ದ ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಿದ ಸಚಿವರು ತಲಕಾಡಿನ ಇತಿಹಾಸ, ತಲಕಾಡು ಉತ್ಖನನದ ಕುರಿತು ಇತಿಹಾಸ ತಜ್ಞರಿಂದ ಮಾಹಿತಿ ಪಡೆದುಕೊಂಡರು. ಹಿರಿಯ ಸಾಹಿತಿ, ನಾಡೋಜ ಪ್ರೊ. ಹಂ.ಪ.ನಾಗರಾಜಯ್ಯ ಸಮಾರೋಪ ನುಡಿಗಳನ್ನಾಡಿದರು. ಕಾರ್ಯಕ್ರಮದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ, ತಲಕಾಡಿನ ಇತಿಹಾಸ ಹಾಗೂ ತಮ್ಮ ಬಾಲ್ಯದ ಅನುಭವ ಮತ್ತು ನೆನಪುಗಳನ್ನು ಸ್ಮರಿಸಿ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಅಶ್ವಿನ್ ಕುಮಾರ್ ಮಾತನಾಡಿ, ತಲಕಾಡು ಪ್ರವಾಸಿ ತಾಣವಾಗಿ ಸಮಗ್ರ ಅಭಿವೃದ್ಧಿಗೆ ಅಗತ್ಯ ಕ್ರಿಯಾ ಯೋಜನೆ ರೂಪಿಸಲಾಗುತ್ತಿದೆ. ತಲಕಾಡಿನಲ್ಲಿ ಸಂಗ್ರಹಾಲಯ ಸ್ಥಾಪಿಸಿ, ಆ ಮೂಲಕ ಜನರಿಗೆ ಐತಿಹಾಸಿಕ ಮಾಹಿತಿ ಒದಗಿಸುವ ಪ್ರಯತ್ನ ಮಾಡಲಾಗುವುದು ಎಂದು ತಿಳಿಸಿದರು.

ಡಾ.ಎನ್.ಎಸ್.ಅನ್ನಪೂರ್ಣ, ಪ್ರಾಂಶುಪಾಲ ಎನ್.ವಿ.ಮುರಳೀಧರ್, ಮೈಸೂರು ವಿವಿ ಕುಲಸಚಿವರಾದ ಆರ್.ಶಿವಪ್ಪ, ಮೈಸೂರು ಪ್ರಾದೇಶಿಕ ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕರಾದ ಡಾ.ಕೆ.ವೀರಭದ್ರಯ್ಯ, ಪ್ರೊ. ಎನ್.ಎಂ.ತಳವಾರ್, ನಿವೃತ್ತ ಅಧ್ಯಕ್ಷರು ಜೈನ ಶಾಸ್ತ್ರ ವಿಭಾಗ ಡಾ.ಓ.ಪದ್ಮಾವತಿ, ಗ್ರಾಪಂ ಅಧ್ಯಕ್ಷ ಕೆಂಪಯ್ಯ, ಕಾರ್ಯನಿರ್ವಾಹಕ ಅಧಿಕಾರಿ ಕೃಷ್ಣ, ತಹಸಿಲ್ದಾರ್ ಬಿ.ಗಿರೀಶ, ಲೋಕೋಪಯೋಗಿ ಎಇಇ ಚಾಮುಂಡೇಗೌಡ, ಶಿರಸ್ತೇದಾರ್ ಪ್ರಭುರಾಜ್ ಮತ್ತಿತರರು ಹಾಜರಿದ್ದರು.



ತಿ.ನರಸೀಪುರ ತಾಲ್ಲೂಕಿನ ತಲಕಾಡಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ 'ತಲಕಾಡಿನ ಗಂಗರು ಮತ್ತು ಚಾವುಂಡರಾಯ' ಎರಡು ದಿನಗಳ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಸಚಿವ ಎಸ್.ಟಿ.ಸೋಮಶೇಖರ್ ಅವರನ್ನು ಅಭಿನಂದಿಸಲಾಯಿತು. ಶಾಸಕ ಅಶ್ವಿನ್‌ಕುಮಾರ್, ನಾಡೋಜ ಪ್ರೊ. ಹಂ.ಪ.ನಾಗರಾಜಯ್ಯ ಇತರರು ಚಿತ್ರದಲ್ಲಿದ್ದಾರೆ.

### 'ಮುಡುಕುತೊರೆ ಜಾತ್ರೆ ಪೂಜಾ ಕಾರ್ಯಗಳು ನಡೆಯಲಿ'

ತಿ. ನರಸೀಪುರ: ಅಗತ್ಯ ಸುರಕ್ಷತಾ ಕ್ರಮಗಳೊಂದಿಗೆ ಸ್ಥಳೀಯವಾಗಿ ಸರಳವಾಗಿ ಮುಡುಕುತೊರೆ ಜಾತ್ರೆ ಉತ್ಸವದ ಪೂಜಾ ಕೈಂಕರ್ಯಗಳನ್ನು ಮಾಡಿಕೊಳ್ಳುವಂತೆ ಜಿಲ್ಲಾ ಉಸ್ತುವಾರಿ ಸಚಿವ ಸೋಮಶೇಖರ್ ಸಲಹೆ ನೀಡಿದರು. ಕೋವಿಡ್ ನಿಯಮದ ಪಾಲನೆ ಹಿನ್ನೆಲೆಯಲ್ಲಿ ಜಾತ್ರೆಯನ್ನು ರದ್ದುಗೊಳಿಸಲಾಗಿದೆ. ಈ ಕುರಿತು ಸರ್ಕಾರ ಆದೇಶ ಮಾಡಿದೆ. ಆದ್ದರಿಂದ ಸ್ಥಳೀಯವಾಗಿ ಸಾಂಪ್ರದಾಯಿಕ ಪೂಜಾ ಕಾರ್ಯಗಳು ನಡೆಯಲಿ. ಕೋವಿಡ್ ನಿಯಮಗಳನ್ನು ಮಾತ್ರ ಕಡ್ಡಾಯವಾಗಿ ಪಾಲನೆ ಮಾಡಿ ಯಾವುದೇ ತೊಂದರೆಯಾಗದಂತೆ ಎಚ್ಚರಿಕೆ ವಹಿಸಿ. ಪೂಜೆಗಳಿಗೆ ಅಗತ್ಯ ಸೌಲಭ್ಯ ದೊರಕಿಸಲು ಅಧಿಕಾರಿಗಳು ಗಮನಹರಿಸಬೇಕು ಎಂದು ತಿಳಿಸಿದರು. ಫೆ. 3ರಿಂದ ಪೂಜಾ ಕಾರ್ಯಕ್ರಮಗಳು ಆರಂಭಗೊಂಡು 19ರವರೆಗೆ ನಡೆಯಲಿದೆ.

### 'ನ್ಯಾ.ಮ... ಅವರನ್ನು ಸೇ...



ಎಸ್.ಡಿ.ಕೋಟೆ: ... ಅಂಬೇಡ್ಕರ್ ಭಾವಚಿತ್ರ ... ಸಂವಿಧಾನಕ್ಕೆ ಅಗೌರವ ... ರಾಯಚೂರು ಜಿಲ್ಲಾ ನ್ಯಾ... ಮಲ್ಲಿಕಾರ್ಜುನ ಗೌಡ ... ಬಂಧಿಸಿ ಸೇವೆಯಿಂದ ವಜಾ ... ಬೇಕು. ಅವರ ವಿರುದ್ಧ ದೇಶ ... ಪ್ರಕರಣ ದಾಖಲಿಸಬೇಕು ... ವಿವಿಧ ಪ್ರಗತಿಪರ ಸಂಘ ... ಸದಸ್ಯರು ಪ್ರತಿಭಟಿಸಿದರು ...

ಪಟ್ಟಣದ ಮಿನಿ ವಿಧಾ... ಮುಂಭಾಗದಲ್ಲಿ ವಿವಿಧ ... ಸಂಘಟನೆಗಳ ಮು... ಪ್ರತಿಭಟನೆ ವೇಳೆ ವ... ಡಾ.ಬಿ.ಆರ್ ಅಂಬೇಡ್ಕರ್ ... ರಚಿಸಿರುವ ಸಂವಿಧಾನ ... ನಾವೆಲ್ಲ ಬದುಕುತ್ತಿದ್ದೇವೆ ... ಧೀಶರ ಪೀಠದ ಮೆ... ಅಂಬೇಡ್ಕರ್ ಅವರ ಭಾವ... ಅಳವಡಿಸಬೇಕು. ಪ್ರತಿಯೊಬ್ಬ ನಾಗರಿಕನ... ನಡೆಯ ಅವಕಾಶ, ಹ... ಕಾನೂನು ದೊರಕಿಸ...

### ತರಬೇತಿ ಮೂಲಕ ಕನಸಿನ ಬೀಜ ಬಿತ್ತಿದ್ದೇವೆ: ದಿವ್ಯಾ



### ಎಐಡಿಎಸ್‌ಒ, ವೈದ್ಯಕೀಯ ವಿದ್ಯಾರ್ಥಿಗಳ ಹೋರಾಟ ಸಮಿತಿಯಿಂದ ಪ್ರತಿಭಟನೆ

# ವೈದ್ಯಕೀಯ ಪರೀಕ್ಷೆ ಮುಂದೂಡಲು ಆಗ್ರಹ

ಮೈಸೂರು: ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯವು ಅಂತಿಮ ವರ್ಷದ ವೈದ್ಯಕೀಯ ವಿದ್ಯಾರ್ಥಿಗಳಿಗೆ ನಿಗದಿ ಮಾಡಿ...



### ಫೆ.5ರಂದು ಗ...

ಮೈಸೂರು: ಜಿಲ್ಲಾ... ವತಿಯಿಂದ ಫೆ.5... ಆಯೋಜಿಸಲಾಗಿದೆ ... ನಟರಾಜ್ ಜೋಡಿ...